**(ದಿನಾಂಕಃ 03.03.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)**

<u>ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ.ಎಸ್.ವಿ ರವರಿಂದ ಃ–</u>

1. ನಾನು ದಾವಾ ಸ್ವತ್ತನ್ನು ನೋಡಿರುತ್ತೇನೆ. ಅಲ್ಲಿ ವಾದಿಯವರ ಮನೆ ಇರುತ್ತದೆ ಎಂದು ಸೂಚಿಸಿದರೆ ಸರಿ. ಮನೆ ಸುತ್ತಲು ಬೇಲಿ ಇರುತ್ತದೆ ಎಂದು ಸೂಚಿಸಿದರೆ ಸರಿ. ನನಗೆ ವಾದಿಗಳಿಗೆ ದಾವಾ ಆಸ್ತಿ ಮಂಜೂರಾದ ಬಗ್ಗೆ ಮಾಹಿತಿ ಇರುವುದಿಲ್ಲ.

2. ನಮ್ಮ ಮನೆ ಮತ್ತು ದಾವಾ ಸ್ವತ್ತಿನ ಮಧ್ಯ ½ ಕಿ.ಮೀ ಅಂತರ ಇರುತ್ತದೆ. ನಾನು ನಮ್ಮ ಮನೆಗೆ ಹೋಗಿ ಬರುವಾಗ ಅದೇ ದಾರಿಯಲ್ಲಿ ದಾವಾ ಸ್ವತ್ತು ಇರುತ್ತದೆ ಎಂದರೆ ಸರಿ. ಸುಮಾರು 20 ರಿಂದ 25 ವರ್ಷಗಳಿಂದ ವಾದಿಗಳು ದಾವಾ ಆಸ್ತಿಯಲ್ಲಿ ಇರುತ್ತಾರೆ ಎಂದರೆ ಸರಿ.

3. ನಾನು ಮುಖ್ಯ ವಿಚಾರಣೆಯನ್ನು ಬರೆಯಲು ಮಾಹಿತಿ ಕೊಟ್ಟಿರುತ್ತೇನೆ. ನನಗೆ ಸರ್ವೆ ನಂ 65 ರಲ್ಲಿ ಪ್ರತಿವಾದಿಗಳಿಗೆ ಜಮೀನು ಮಂಜೂರಾದ ಬಗ್ಗೆ ಗೊತ್ತಿರುವುದಿಲ್ಲ. ನಾನು ಮತ್ತು ಪ್ರತಿವಾದಿ 2 ರವರು ಆತ್ಮೀಯರಾಗಿರುತ್ತೇವೆ ಎಂದರೆ ಸರಿ. ನನ್ನನ್ನು ಪ್ರತಿವಾದಿ 2 ರವರು ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ.

4. ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರತಿವಾದಿ 2 ರವರ ವಿಶ್ವಾಸದಿಂದ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ ಇರುವುದಿಲ್ಲ.**</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಹೊಸನಗರ.